O.S .No. 63/2012
DW-1

ದಿನಾಂಕ: 05-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ವಾದಿ ಪರ ಶ್ರೀ ಎಲ್.ಕೆ.ಜೆ. ವಕೀಲರಿಂದಃ

ವಾದಿ ಗೊತ್ತು. ವಾದಿಗೆ ಹುಣಸೂರು ತಾಲ್ಲೂಕು, ಬಸ್ಸಿ ಮಾದನಹಳ್ಳಿಯ ಸ.ನಂ.22 ಸಾಗುವಳಿಯ ಮೂಲಕ ಬಂದಿರುತ್ತದೆಂದರೆ ಸರಿ. ಸದರಿ ಜಮೀನು ದುರಸ್ತು ಆಗಿ ಸ.ನಂ. 139 ಮತ್ತು 140 ಎಂದು ಪ್ರತ್ಯೇಕವಾಗಿ ಖಾತೆಯಾಗಿರುತ್ತದೆಂದರೆ ಸರಿ. ವಾದಿ ದಾವೆಯನ್ನು ಯಾವ ವಿಚಾರವಾಗಿ ಹೂಡಿರುತ್ತಾರೆಂದರೆ ಸಾಕ್ಷಿ ದಾರಿ ಬೇಕೆಂದು ಹೂಡಿರುತ್ತಾರೆ ಎಂದು ಹೇಳುತ್ತಾರೆ. 1994-95 ರಲ್ಲಿ ವಾದಿಗೆ ದಾವಾ ಆಸ್ತಿ ಸಾಗುವಳಿ ನೀಡಲಾಗಿದೆ ಎಂದರೆ ಸರಿ. ಅಂದಿನಿಂದ ಇಂದಿನವರೆಗೂ ದಾವಾ ಆಸ್ತಿಯಲ್ಲಿ ವಾದಿಯೇ ಸಾಗುವಳಿ ಮಾಡಿಕೊಂಡು, ಮುಂದುವರೆಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ.

ವಾದಿಯ ಜಮೀನಿಗೆ ಹೋಗಲು ಸ.ನಂ.22 ರ ಮುಖೇನ ದಾರಿ ಇದೆ ಎಂದರೆ ಸಾಕ್ಷಿ ದಾರಿ ಇಲ್ಲ ಎಂದು ಹೇಳುತ್ತಾರೆ. ಸ.ನಂ.22 ರಲ್ಲಿ ಸುಮಾರು 650 ರಿಂದ 700 ಎಕರೆ ಜಮೀನು ಇದೆ ಎಂದರೆ ಸರಿ. ದಾವೆ ಹೂಡುವ ಕಾಲಕ್ಕೆ ಸ.ನಂ.22 ರಲ್ಲಿ ಯಾರಿಗೂ ಜಮೀನು ಸಾಗುವಳಿ ನೀಡಲಾಗಿರಲಿಲ್ಲ ಎಂದರೆ ಸರಿ. ಯಾರಿಗೂ ಸಾಗುವಳಿ ನೀಡದೇ ಇರುವುದರಿಂದ, ಸ.ನಂ.22 ರಲ್ಲಿ ಅನಧಿಕೃತ ಸಾಗುವಳಿ ಮಾಡುತ್ತಿದ್ದವರು ಮುಂದಕ್ಕೆ ಹೋಗಲು ಜಮೀನುಗಳ ಮೇಲೆನೆ ಓಡಾಡಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ.

ವಾದಿಗೆ ಸಾಗುವಳಿಯಾಗುವವರೆಗೂ ಸ.ನಂ.22 ರಲ್ಲಿರುವ ಅನಧಿಕೃತ ಹಿಡುವಳಿದಾರರು ಓಡಾಡಲು ಯಾವುದೇ ತೊಂದರೆ ಕೊಡುತ್ತಿರಲಿಲ್ಲ ಎಂದರೆ ಸಾಕ್ಷಿ ಅಲ್ಲಿ ಯಾರು ಓಡಾಡುತ್ತಿರಲಿಲ್ಲ ಎಂದು ಹೇಳುತ್ತಾರೆ. ಪ್ರಸ್ತುತ ದಾವೆಯನ್ನು ವಾದಿ 2012-13 ರಲ್ಲಿ ಹೂಡಿರುತ್ತಾರೆ. 2012-13 ರಲ್ಲಿ ದಾವೆ ಹೂಡುವ ಕಾಲಕ್ಕೆ ನಿಮ್ಮಗಳಿಗೆ ಯಾರಿಗೂ ಸ.ನಂ. ಮಂಜೂರು ಆಗಿರಲಿಲ್ಲ ಎಂದರೆ ಸರಿ. ನಿಮ್ಮಗಳನ್ನು ಹೊರತು ಪಡಿಸಿ ವಾದಿಗೆ 1994-95 ನೇ ಸಾಲಿನಲ್ಲಿ ದಾವಾ ಆಸ್ತಿ ಮಂಜೂರು ಆಗಿತ್ತು ಎಂಬ ಕಾರಣದಿಂದ ಅವರು ತಿರುಗಾಡುತ್ತಿದ್ದ ದಾರಿಗೆ ನೀವುಗಳು ತೊಂದರೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ 50 ವರ್ಷದಿಂದ ಯಾವಾಗಲೂ ತಿರುಗಾಡಿಲ್ಲ ಎಂದು ಹೇಳುತ್ತಾರೆ.

ವಾದಿಯನ್ನು ಒಳಗೊಂಡಂತೆ 25-30 ಜನ ಸಾಗುವಳಿದಾರರು ಸ.ನಂ.22 ರ ಬದುವಿನಲ್ಲಿರುವ ರಸ್ತೆಯಲ್ಲೇ ಓಡಾಡುತ್ತಿದ್ದರು ಎಂದರೆ ಸಾಕ್ಷಿ ಓಡಾಡುತ್ತಿದ್ದರು ಎಂದು ಹೇಳಿದ್ದು, ನಂತರ ವಾದಿ ಬಂದಿಲ್ಲ ಅಲ್ಲಿ ಎಂದು ಹೇಳುತ್ತಾರೆ. ವಾದಿಗೆ ದಾವಾ ಆಸ್ತಿ ಮಂಜೂರಾದಾಗಿನಿಂದ ಬೇರೆ ಅನಧಿಕೃತ ಹಿಡುವಳಿದಾರರಿಗ್ಯಾರಿಗೂ ತೊಂದರೆ ಕೊಡದೆ, ವಾದಿಗೆ ಮಾತ್ರ ಓಡಾಡಲು ತೊಂದರೆ ಕೊಡುತ್ತಿದ್ದೀರಾ ಎಂದರೆ ಸಾಕ್ಷಿ ಅಲ್ಲಿ ಯಾರು ಬಂದಿಲ್ಲ ಎಂದು ಹೇಳುತ್ತಾರೆ. ವಾದಿ ರಸ್ತೆಯಲ್ಲಿ ಓಡಾಡಲು ತೊಂದರೆ ಕೊಟ್ಟಿದ್ದರಿಂದ ನಿಮ್ಮಗಳ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಲಾಗಿತ್ತು ಎಂದರೆ ಸರಿ. ಸದರಿ ದೂರಿನನ್ವಯ ಸಂಬಂಧಪಟ್ಟ ಅಧಿಕಾರಿಗಳು ಗಲಾಟೆಯಾದ ಜಾಗ ಮತ್ತು ರಸ್ತೆಯ ಸಂಬಂಧ ಅಳತೆ ಮಾಡಿದರು ಎಂದರೆ ಸರಿಯಲ್ಲ. ಅಧಿಕಾರಿಗಳು ವಾದಿಗೆ ತಿರುಗಾಡಲು ತೊಂದರೆ ಕೊಡದಂತೆ ನಿಮಗೆ ಬುದ್ದಿವಾದ ವನ್ನು ಸಹ ಹೇಳಿದ್ದರು ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ಗ್ರಾಮದಲ್ಲಿ ಗ್ರಾಮ ಸಭೆಯೂ ಸಹ ಆಗಿ ವಾದಿಗೆ ತಿರುಗಾಡಲು ರಸ್ತೆಗೆ ತೊಂದರೆ ಕೊಡದಂತೆ ತೀರ್ಮಾನವಾಗಿದ್ದು, ಅದಕ್ಕೆ ನೀವು ಸಹ ಒಪ್ಪಿ ದ್ದೀರಿ ಎಂದರೆ ಸರಿಯಲ್ಲ. ಗ್ರಾಮ ಸಭೆಯಾದ ಕಾಲಕ್ಕೆ ನೀವು ಒಪ್ಪಿಕೊಂಡಿದ್ದು, ನಂತರ ನಿಮ್ಮ ಮೇಲಿದ್ದ ಕ್ರಿಮಿನಲ್ ಪ್ರಕರಣಗಳು ತೀರ್ಮಾನವಾದ ನಂತರ ಪುನಃ ವಾದಿಗೆ ರಸ್ತೆಯಲ್ಲಿ ತಿರುಗಾಡಲು ತೊಂದರೆ ಕೊಡಲು ಪ್ರಾರಂಭ ಮಾಡಿರುತ್ತೀರಾ ಎಂದರೆ ಸರಿಯಲ್ಲ. ಗ್ರಾಮದಲ್ಲಿ ತೀರ್ಮಾನವಾಗಿದ್ದರೂ, ಸ್ಥಳಕ್ಕೆ ಅಧಿಕಾರಿಗಳು ಭೇಟಿ ನಿಮಗೆ ತಿಳುವಳಿಕೆ ಹೇಳಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು).

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.